# ಯಾದವರ ಮಕ್ಕಳ ಪ್ರತಿಭಾಪುರಸ್ಕಾರ ಉತ್ತೇಜನ, ಪ್ರೋತ್ಸಾಹ ಸಾಧನೆಗೆ ಪ್ರೇರಣೆ



**ಚಿತ್ರದುರ್ಗ**

ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ಪುರಸ್ಕರಿಸುವುದರಿಂದ ಇತರೆ ವಿದ್ಯಾರ್ಥಿಗಳು ಜಾಸ್ತಿ ಅಂಕಗಳನ್ನು ತೆಗೆದುಕೊಳ್ಳಲು ಪ್ರೇರೇಪಿಸಿದಂತಾಗುತ್ತದೆ ಎಂದು ವಿಧಾನಪರಿಷತ್ ಸದಸ್ಯೆ ಜಯಮ್ಮಬಾಲರಾಜ್ ಹೇಳಿದರು.

ಜಿಲ್ಲಾ ಯಾದವ(ಗೊಲ್ಲ)ಜನಾಂಗದಿಂದ ಸ್ಟೇಡಿಯಂ ರಸ್ತೆಯಲ್ಲಿರುವ ಕ್ರೀಡಾಭವನದಲ್ಲಿ ಸಮಾಜದ ಪ್ರತಿಭಾವಂತ ಮಕ್ಕಳಿಗಾಗಿ ಹಮ್ಮಿಕೊಳ್ಳಲಾಗಿದ್ದ ಪ್ರತಿಭಾ ಪುರಸ್ಕಾರ ಹಾಗೂ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

> ಪ್ರೋತ್ಸಾಹಿಸುವವರು ಇದ್ದಾಗ ಮಾತ್ರ ಸಾಧನೆ ಮಾಡಲು ನೆರವಾಗಲಿದೆ. ಗೊಲ್ಲ ಸಮಾಜದ ವಿದ್ಯಾರ್ಥಿಗಳು ಐ.ಎ.ಎಸ್., ಐ.ಪಿ.ಎಸ್., ಕೆ.ಎ.ಎಸ್ .ಪರೀಕ್ಷೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತೇರ್ಗಡೆಯಾಗಬೇಕಾಗಿರುವುದರಿಂದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಕಠಿಣ ಪರಿಶ್ರಮ ಹಾಕಬೇಕು. ಶಿಕ್ಷಣದಲ್ಲಿ ಹಿಂದೆ ಇರುವುದರಿಂದ ಜನಾಂಗದ ಅಭಿವೃದ್ಧಿ ಕುಂಠಿತವಾಗಿದೆ. ಇದರಿಂದ ಸಾಮಾಜಿಕ, ರಾಜಕೀಯ, ಆರ್ಥಿಕವಾಗಿ ಹಿಂದುಳಿಯಲು ಕಾರಣವಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಣಕ್ಕೆ ಆದ್ಯತೆ ನೀಡಬೇಕು

ಪ್ರೋತ್ಸಾಹಿಸುವವರು ಇದ್ದಾಗ ಮಾತ್ರ ಸಾಧನೆ ಮಾಡಲು ನೆರವಾಗಲಿದೆ. ಗೊಲ್ಲ ಸಮಾಜದ ವಿದ್ಯಾರ್ಥಿಗಳು ಐ.ಎ.ಎಸ್., ಐ.ಪಿ.ಎಸ್., ಕೆ.ಎ.ಎಸ್ .ಪರೀಕ್ಷೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತೇರ್ಗಡೆಯಾಗಬೇಕಾಗಿರುವುದರಿಂದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಕಠಿಣ ಪರಿಶ್ರಮ ಹಾಕಬೇಕು. ಶಿಕ್ಷಣದಲ್ಲಿ ಹಿಂದೆ ಇರುವುದರಿಂದ ಜನಾಂಗದ ಅಭಿವೃದ್ಧಿ ಕುಂಠಿತವಾಗಿದೆ. ಇದರಿಂದ ಸಾಮಾಜಿಕ, ರಾಜಕೀಯ, ಆರ್ಥಿಕವಾಗಿ ಹಿಂದುಳಿಯಲು ಕಾರಣವಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದು ಕರೆ ನೀಡಿದರು.

ಸರ್ಕಾರವೂ ನಮ್ಮ ಜನಾಂಗದ ಶಿಕ್ಷಣಕ್ಕಾಗಿ ಅನೇಕ ಸವಲತ್ತುಗಳನ್ನು ನೀಡಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಮೂರು ಬಾಲಕಿಯರ ಹಾಗೂ ಮೂರು ಬಾಲಕರ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದೆ. ಹಾಸ್ಟೆಲ್‌ನಲ್ಲಿ ಸೀಟು ಸಿಗದ ಐದು ಕಿ.ಮೀ.ದೂರದಿಂದ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಯೋಜನೆಯಡಿ ತಿಂಗಳಿಗೆ ಒಂದುವರೆ ಸಾವಿರ ರೂ.ನೀಡುತ್ತಿದೆ. ಗೊಲ್ಲ ಜನಾಂಗದಿಂದ ನಾನು ಎಂ.ಎಲ್.ಸಿ.ಯಾಗಿರುವುದು ನನಗೆ ಹೆಮ್ಮೆ ತಂದಿದೆ. ವಿಧಾನಪರಿಷತ್ ಸದಸ್ಯರ ಅನುದಾನದಲ್ಲಿ ಯಾದವ ಮಠಕ್ಕೆ ಹತ್ತು ಲಕ್ಷ ರೂ, ಹಾಸ್ಟೆಲ್‌ಗೆ ಹತ್ತು ಲಕ್ಷ ರೂ, ಚಳ್ಳಕೆರೆಯಲ್ಲಿ ಹತ್ತು ಲಕ್ಷ ರೂ, ಬಳ್ಳಾರಿಗೂ ಹತ್ತು ಲಕ್ಷ ರೂ.ನೀಡುವುದಾಗಿ ಭರವಸೆ ಕೊಟ್ಟಿದ್ದೇನೆ. ಹಿರಿಯೂರು ತಾಲೂಕು ಕೋಡಿಹಳ್ಳಿಯ ಈರಣ್ಣ ದೇವಸ್ಥಾನಕ್ಕೆ 10 ಲಕ್ಷ ರೂ.ಗಳನ್ನು ನೀಡಿದ್ದೇನೆ. ಚಳ್ಳಕೆರೆಯಲ್ಲಿ ಕೃಷ್ಣ ಸಮುದಾಯ ಭವನಕ್ಕೆ ಐವತ್ತು ಲಕ್ಷ ರೂ. ಎಲ್ಲಾ ಗೊಲ್ಲರಹಟ್ಟಿಗಳಲ್ಲಿ ಐದತ್ತು ಲಕ್ಷ ರೂ.ಗಳನ್ನು ಕೊಟ್ಟಿದ್ದೇನೆ. ತುಮಕೂರು ಜಿಲ್ಲೆಯಲ್ಲಿ ಜುಂಜಪ್ಪ ಅಧ್ಯಯನ ಕೇಂದ್ರ ತೆರೆಯುವಂತೆ ಸರ್ಕಾರದ ಗಮನಕ್ಕೆ ತರಲಾಗಿದೆ. ಶಾಲಾ-ಕಾಲೇಜುಗಳಿಗೂ ಸಾಕಷ್ಟು ಅನುದಾನವನ್ನು ನೀಡಲಾಗಿದೆ. ಹಾಗಾಗಿ ಒಂದು ಕೋಟಿ ರೂ.ಅನುದಾನ ಮಂಜೂರು ಮಾಡುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇನೆ ಎಂದರು.

ಗೊಲ್ಲ ಜನಾಂಗವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂಬ ನಮ್ಮ ಬಲವಾದ ಬೇಡಿಕೆಗೆ ಸ್ಪಂದಿಸಿರುವ ರಾಜ್ಯ ಸರ್ಕಾರ ಕ್ಯಾಬಿನೆಟ್‌ನಲ್ಲಿ ಪಾಸ್ ಮಾಡಿ ಕೇಂದ್ರಕ್ಕೆ ಕಳಿಸಿದೆ. ನಾನು ಕೂಡ ಜನಾಂಗದ ಪರವಾಗಿ ಸರ್ಕಾರದ ಮೇಲೆ ಒತ್ತಡ ಹಾಕುತ್ತಿದ್ದೇನೆ. ಇದಕ್ಕೆ ಸಮಾಜದ ಬೆಂಬಲವೂ ಅತ್ಯವಶ್ಯಕ ಎಂದು ಹೇಳಿದ ಜಯಮ್ಮ ಬಾಲರಾಜ್ ಗೊಲ್ಲರಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಿ ಸರ್ಕಾರ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಮಹಲಿಂಗಪ್ಪ, ಮಾಜಿ ಶಾಸಕ ಎ.ವಿ.ಉಮಾಪತಿ, ದೊಡ್ಡಯ್ಯ ಯಾದವ ನೌಕರ ಸಂಘದ ಅಧ್ಯಕ್ಷ ಕೃಷ್ಣಪ್ಪ ವೇದಿಕೆಯಲ್ಲಿದ್ದರು.

ಕೃಷ್ಣಯಾದವಾನಂದಸ್ವಾಮಿ ಸಾನಿಧ್ಯ ವಹಿಸಿದ್ದರು.

# ಪರಿಸರಕುರಿತುಜಾಗೃತಿಮೂಡಿಸುವಕೆಲಸವಾಗಬೇಕು

**ಚಿತ್ರದುರ್ಗ**

ಉತ್ತಿಷ್ಠ ಭಾರತ, ಸಾಮಾಜಿಕ ಅರಣ್ಯ ಇಲಾಖೆ, ಜ್ಞಾನದೀಪ ಹಾಗೂ ವಾಸವಿ ಶಾಲೆ, ಫೋರ್ಟ್ ಸಿಟಿ ರೆಡ್‌ಬುಲ್, ಇನ್ನರ್‌ವೀಲ್ ಕ್ಲಬ್ ಚಿತ್ರದುರ್ಗ, ರೋಟರಿ ಕ್ಲಬ್ ಚಿತ್ರದುರ್ಗ ಇನ್ನು ಅನೇಕ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಆಡುಮಲ್ಲೇಶ್ವರದಲ್ಲಿ ಭಾನುವಾರ ಬೀಜದುಂಡೆಗಳನ್ನು ಬಿತ್ತಲಾಯಿತು.

ಬೀಜದುಂಡೆ, ಕುಡಗೋಲು, ಹಾರೆ, ಸಲಕೆಗಳ ಮೂಲಕ ಆಡುಮಲ್ಲೇಶ್ವರದ ಸುತ್ತಮುತ್ತ ಹತ್ತಾರು ಕಿ.ಮೀ.ಆಸುಪಾಸಿನಲ್ಲಿ ಬೀಜದುಂಡೆಗಳನ್ನು ಪಸರಿಸಿದರು.

ರೋಟರಿ ಕ್ಲಬ್ ಉಪಾಧ್ಯಕ್ಷ ವಿಶ್ವನಾಥ್ ಮಾತನಾಡುತ್ತ ದಿನದಿಂದ ದಿನೆ ಮರ ಗಿಡಗಳ ಸಂಖ್ಯೆ ಕಡಿಮೆಯಾಗುತ್ತಿರುವುದರಿಂದ ಸಮಯಕ್ಕೆ ಸರಿಯಾಗಿ ಮಳೆಯಾಗುತ್ತಿಲ್ಲ. ಇದರಿಂದ ಸಕಲ ಜೀವರಾಶಿಗಳು ಕುಡಿಯುವ ನೀರಿಗೆ ಪರಿತಪಿಸುವಂತಾಗಿದೆ. ರೈತಾಪಿ ವರ್ಗ ಕೂಡ ಬೆಳೆಯಿಲ್ಲದೆ ಕಂಗಾಲಾಗಿದ್ದಾರೆ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಬೀಜದ ಉಂಡೆಗಳನ್ನು ಬಿತ್ತುವ ಕಾರ್ಯಕ್ಕೆ ಮುಂದಾಗಿದ್ದೇವೆ. ಇದರಿಂದ ಇಂದಲ್ಲ ನಾಳೆ ಪರಿಸರಕ್ಕೆ ಉತ್ತಮ ಕೊಡುಗೆ ನೀಡಿದಂತಾಗುತ್ತದೆ ಎಂದು ಹೇಳಿದರು.

ಸಾಮಾಜಿಕ ಅರಣ್ಯ ಇಲಾಖೆಯ ಡಿ.ಎಫ್.ಓ., ಮಳವಳ್ಳಿ ಮಾತನಾಡುತ್ತ. ಪರಿಸರವನ್ನು ಸಂರಕ್ಷಿಸುವ ಜಾಗೃತಿ ಪ್ರತಿಯೊಬ್ಬರಲ್ಲಿಯೂ ಮೂಡಿದಾಗ ಮಾತ್ರ ಮರಗಿಡಗಳನ್ನು ನಾಶವಾಗದಂತೆ ಕಾಪಾಡಿಕೊಳ್ಳಬಹುದು. ಬರದನಾಡು ಚಿತ್ರದುರ್ಗದಲ್ಲಿ ಹೆಚ್ಚು ಹೆಚ್ಚು ಮರ ಗಿಡಗಳನ್ನು ನೆಟ್ಟು ಪೋಷಿಸಿದಾಗ ಮಾತ್ರ ಪ್ರಕೃತಿಗೆ ಏನಾದರೂ ಕೊಡುಗೆ ನೀಡಿದಂತಾಗುತ್ತದೆ ಎಂದರು.

ಇನ್ನರ್‌ವೀಲ್ ಕ್ಲಬ್ ಅಧ್ಯಕ್ಷೆ ರಾಜೇಶ್ವರಿಸಿದ್ದರಾಂ, ನಾಗಭೂಷಣ್, ಜ್ಯೋತಿಲಕ್ಷ್ಮಣ್, ವಾಸವಿ ವಿದ್ಯಾಸಂಸ್ಥೆಯ ಸುರೇಶ್‌ರಾಜು, ಲಕ್ಷ್ಮಣ್, ಜ್ಞಾನದೀಪ ಹಾಗೂ ವಾಸವಿ ಶಾಲೆ ಮಕ್ಕಳು, ಸಾಮಾಜಿಕ ಅರಣ್ಯ ಇಲಾಖೆ ಸಿಬ್ಬಂದಿಗಳು ಬೀಜದುಂಡೆ ಪ್ರಸರಣದಲ್ಲಿ ಪಾಲ್ಗೊಂಡಿದ್ದರು.

ಆಡುಮಲ್ಲೇಶ್ವರದ ಸುತ್ತಮುತ್ತ ಅರಣ್ಯ ಪ್ರದೇಶದಲ್ಲಿ ಒಂದು ಲಕ್ಷದಷ್ಟು ಬೀಜದ ಉಂಡೆಗಳನ್ನು ಬಿತ್ತಲಾಯಿತು.

# ಭಗೀರಥಪೀಠದ ಜಮೀನಿನಲ್ಲಿ ಶ್ರೀಗಂಧ ಮರ ಕಳುವು

**ಚಿತ್ರದುರ್ಗ**

ಹೊಸದುರ್ಗ ತಾಲೂಕು ಭಗೀರಥಪೀಠದ ಜಮೀನಿನಲ್ಲಿ ಶನಿವಾರ ರಾತ್ರಿ ಬೆಲೆಬಾಳುವ ಗಂಧದ ಮರಗಳನ್ನು ಕಡಿದು ಸಾಗಿಸಲಾಗಿದೆ.ಕಳದೆ ಇಪ್ಪತ್ತೈದು ಮೂವತ್ತು ವರ್ಷಗಳಿಂದ ಬೆಳೆಸಿ ಕಾಪಾಡಿಕೊಂಡು ಬಂದಿದ್ದ ಗಂಧದ ಮರಗಳನ್ನು ಬುಡಸಮೇತ ಕಡಿದು ಕಳವು ಮಾಡಲಾಗಿದೆ. ಅವಸರದಲ್ಲಿ ಕಳ್ಳರು ಕೆಲವು ತುಂಡಗಳನ್ನು ಜಮೀನಿನಲ್ಲಿಯೇ ಬಿಟ್ಟು ಪರಾರಿಯಾಗಿದ್ದಾರೆ.ಶ್ರೀಗಂಧದ ಮರಗಳನ್ನು ಕಡಿಯಲು ಗರಗಸ ಹಾಗೂ ಕೊಡಲಿಯನ್ನು ಬಳಸಲಾಗಿದೆ. ವಿಷಯ ತಿಳಿದ ಕೂಡಲೆ ಉಪ್ಪಾರ ಸಮಾಜದ ಜಿಲ್ಲಾಧ್ಯಕ್ಷ ಆರ್.ಮೂರ್ತಿ ಹಾಗೂ ಜನಾಂಗದ ಮುಖಂಡರು ಸ್ಥಳಕ್ಕೆ ತೆರಳಿ ಮರಗಳನ್ನು ಕಡಿದಿರುವುದನ್ನು ವೀಕ್ಷಿಸಿ ಹೊಸದುರ್ಗ ಪೊಲೀಸರಿಗೆ ಮತ್ತು ಅರಣ್ಯ ಇಲಾಖೆಯವರಿಗೆ ದೂರು ನೀಡಿದ್ದಾರೆ. ಕಳುವು ಮಾಡಿರುವ ಗಂಧದ ಮರಗಳು ಅಂದಾಜು 25 ರಿಂದ 30 ಲಕ್ಷ ರೂ.ಬೆಲೆಯಾಗಿರಬಹುದೆಂದು ಅಂದಾಜಿಸಲಾಗಿದೆ.

# ಅಂಬೇಡ್ಕರ್ ಅಭಿವೃದ್ಧಿ ನಿಗಮದ ಸೌಲಭ್ಯಗಳನ್ನು ಸದ್ವಿನಿಯೋಗ ಪಡಿಸಿಕೊಳ್ಳುವಂತೆ ಮನವಿ



**ಚಳ್ಳಕೆರೆ**

ಕ್ಷೇತ್ರದ ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ಹೆಚ್ಚಿನ ಆರ್ಥಿಕ ಶಕ್ತಿಯನ್ನು ಒದಗಿಸುವಲ್ಲಿ ಸರ್ಕಾರ ಹೆಚ್ಚಿನ ಆಸಕ್ತಿ ವಹಿಸಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ವತಿಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡಿ ಅವರಿಗೆ ಸಹಾಯ ದನದ ಚೆಕ್ ವಿತರಣೆ ಮಾಡಲಾಗುತ್ತಿದೆ. ಪರಿಶಿಷ್ಟ ವರ್ಗದ ಫಲಾನುಭವಿಗಳು ನಿಗಮ ನೀಡಿದ ಸಾಲವನ್ನು ಸದ್ವಿನಿಯೋಗ ಪಡಿಸಿಕೊಳ್ಳಬೇಕೆಂದು ಶಾಸಕ ಟಿ.ರಘುಮೂರ್ತಿ ತಿಳಿಸಿದರು.

ಅವರು, ಭಾನುವಾರ ಇಲ್ಲಿನ ಶಾಸಕ ಭವನದಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮ ವಿವಿಧ ಫಲಾನುಭವಿಗಳಿಗೆ ನೀಡಿದ ಸಹಾಯ ದನದ ಚೆಕನ್ನು ವಿತರಿಸಿ ಮಾತನಾಡಿದರು. 35 ಸಾವಿರ ಚೆಕ್‌ನ ಆರು ಜನ ಫಲಾನುಭವಿಗಳಿಗೆ 2.10 ಸಾವಿರ ಮತ್ತು 2 ಮಹಿಳಾ ಸ್ವಸಹಾಯ ಸಂಘಗಳಿಗೆ 3 ಲಕ್ಷ ಒಟ್ಟು 5.10 ಲಕ್ಷ ಮೌಲ್ಯದ ಚೆಕ್‌ನ್ನು ಅವರು ವಿತರಿಸಿದರು. ನಗರದ ಕಾಟಪ್ಪನಹಟ್ಟಿಯ ಸರಸ್ವತಿ ಮಹಿಳಾ ಸ್ವಸಹಾಯ ಸಂಘ ಚೆಕನ್ನು ಸ್ವೀಕರಿಸಿ ಮಾತನಾಡಿ, ನಿಗಮ ನೀಡಿದ ಈ ಆರ್ಥಿಕ ಅನುದಾನವನ್ನು ಸಂಘದ ಬೆಳವಣಿಗೆಗೆ ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಲಾಗುವುದು. ಶಾಸಕರು ನಿಗಮದಿಂದ ನಮಗೆ ಒಟ್ಟು 1.50 ಲಕ್ಷದ ಸಹಾಯ ದನ ಚೆಕ್ ವಿತರಿಸಿದ್ದಾರೆ. ಇನ್ನೂ ಹೆಚ್ಚಿನ ಮೊತ್ತದಲ್ಲಿ ನೆರವು ನೀಡಿದಲ್ಲಿ ಮಹಿಳಾ ಸ್ವಸಹಾಯ ಸಂಘಗಳು ಮತ್ತಷ್ಟು ಆರ್ಥಿಕ ಬಲವರ್ಧನೆಯನ್ನು ಹೊಂದಲು ಸಾಧ್ಯವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಜಿ.ವೀರೇಶ್, ಚನ್ನಕೇಶವ, ಯುವ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಿವಕುಮಾರಸ್ವಾಮಿ, ಕೆಡಿಪಿ ಸದಸ್ಯ ಬಡಗಿಪಾಪಣ್ಣ, ಮೊಹನಚಾರಿ, ಸೈಪುಲ್ಲಾ, ಭದ್ರಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿ ಗುನ್ನಯ್ಯ, ರಾಮಾಂಜನೇಯ, ಮುಂತಾದವರು ಉಪಸ್ಥಿತರಿದ್ದರು.

# ವಿಶ್ವದ ಆಕರ್ಷಣೀಯ ಭಾಷೆ ಇಂಗ್ಲೀಷ್

**ಚಿತ್ರದುರ್ಗ**

ಯಾವುದೇ ಭಾಷೆಯನ್ನು ಕಲಿಯಲು ಮಡಿವಂತಿಕೆ ಎಂಬುದು ಇರುವುದಿಲ್ಲ, ಜಗತ್ತಿನ ಯಾವ ಭಾಷೆಯನ್ನೂ ಸಹ ಶ್ರೇಷ್ಠ-ಕನಿಷ್ಠ ಎಂದು ಪರಿಗಣಿಸಲು ಸಾಧ್ಯವಿಲ್ಲ. ಯಾವುದೇ ಭಾಷೆಗೆ ಹೋಲಿಸಿದರೆ ಮಾತೃಭಾಷೆ ಸಹಜವಾಗಿ ಮೇಲುಗೈ ಸಾಧಿಸುತ್ತದೆ. ಆದರೆ ಇಂಗ್ಲಿಷ್ ತನ್ನ ವಿಶಿಷ್ಟ ಗುಣಗಳಿಂದಾಗಿ ವಿಶ್ವದ ಆಕರ್ಷಣೀಯ ಭಾಷೆಯಾಗಿ ಬೆಳೆದಿದೆ ಎಂದು ಲೇಖಕ ಹಾಗೂ ಉಪನ್ಯಾಸಕ ಯೋಗೀಶ್ ಸಹ್ಯಾದ್ರಿ ಅಭಿಪ್ರಾಯಪಟ್ಟರು.

ನಗರದ ಬುದ್ಧನಗರದ ಕೊಳಗೇರಿ ಪ್ರದೇಶದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ (ಹ್ಯಾಪಿ ಸ್ಕೂಲ್) ವಿದ್ಯಾರ್ಥಿಗಳಿಗೆ ಸ್ಟೆಕ್ ಎಜುಕೇಷನ್ ಟ್ರಸ್ಟ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಉಚಿತ ಇಂಗ್ಲಿಷ್ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಡಿಜಿಟಲ್ ಇಂಡಿಯಾದಂತಹ ಪರಿಕಲ್ಪನೆಯೊಂದಿಗೆ ಮುನ್ನುಗ್ಗುತ್ತಿರುವ ನಮ್ಮ ದೇಶದ ಶೇಕಡಾ 90% ರಷ್ಟು ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಕಬ್ಬಿಣದ ಕಡಲೆಯಾಗಿರುವುದರ ಜೊತೆಗೆ ಕೀಳರಿಮೆಯ ಮನೋಭಾವವನ್ನು ಸೃಷ್ಟಿಸಿದೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಷ್ಟೇ ಅಲ್ಲದೆ ನಗರ ಪ್ರದೇಶಗಳ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳೂ ಸಹ ಇಂಗ್ಲಿಷ್ ಕಲಿಕೆಯ ಕಠಿಣ ಸವಾಲುಗಳನ್ನು ಎದುರಿಸವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಶಿಕ್ಷಣ ಇಲಾಖೆಯ ಮಕ್ಕಳ ಕಲಿಕಾ ಮಟ್ಟವನ್ನು ಹೆಚ್ಚಿಸಲು ಹಲವಾರು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿರುವುದು ಸ್ವಾಗತಾರ್ಹವಾಗಿದ್ದು, ಸಮಾಜದ ಶಿಕ್ಷಣ ತಜ್ಞರು, ಉತ್ಸಾಹಿ ಯುವಕರು ಶಿಕ್ಷಕರ ಜೊತೆ ಕೈಜೋಡಿಸಬೇಕಿದೆ. ಕನ್ನಡ ಭಾಷೆಯು ಪ್ರೀತಿ, ಆದರಗಳನ್ನು ಕಲಿಸಿಕೊಟ್ಟರೆ, ಇತರ ಭಾಷೆಗಳು ಜ್ಞಾನವನ್ನು ಹೆಚ್ಚಿಸಬಲ್ಲವು ಎಂದು ತಿಳಿಸಿದ ಯೋಗೀಶ್ ಸಹ್ಯಾದ್ರಿ ಇಂಗ್ಲಿಷ್ ಭಾಷೆಗೆ ವಿಶ್ವವನ್ನು ಒಗ್ಗೂಡಿಸುವ ಶಕ್ತಿಯಿದೆ ಎಂದು ಅರುಹಿದರು.

ಶಾಲೆಯ ಮುಖ್ಯಶಿಕ್ಷಕಿ ಅನ್ನಪೂರ್ಣ ಮಾತನಾಡಿ ಎಲ್ಲ ಭಾಷೆಗಳು ಕಲಿಯಲು ಸುಲಭ. ಆದರೆ ಕಲಿಯುವ ಹುಮ್ಮಸ್ಸು ಇರಬೇಕು. ಈ ಕಾರ್ಯದಲ್ಲಿ ಶಿಕ್ಷಕರು ಪ್ರೇರಣೆ ನೀಡಬೇಕಾಗಿದೆ. ಸರ್ಕಾರಿ ಶಾಲೆಗಳಲ್ಲಿ ಓದಿ ಅಸಾಮಾನ್ಯ ಸಾಧನೆ ಮಾಡಿರುವ ಅಸಂಖ್ಯಾತ ಉದಾಹರಣೆಗಳಿವೆ. ಕೊಳಚೆ ಪ್ರದೇಶಗಳ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ಕರೆದೊಯ್ಯುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ತಿಳಿಸಿದ ಅವರು ಯೋಗೀಶ್ ಸಹ್ಯಾದ್ರಿಯವರಂತಹ ಯುವ ಚೇತನಗಳ ಅವಶ್ಯಕತೆ ಸಮಾಜಕ್ಕೆ ಬಹಳಷ್ಟಿದೆ. ಸಹ್ಯಾದ್ರಿಯವರ ಸರ್ಕಾರಿ ಶಾಲೆಯ ಬಡ ಮಕ್ಕಳಿಗೆ ಉಚಿತವಾಗಿ ಇಂಗ್ಲಿಷ್ ಕಲಿಸುವ ಕಾರ್ಯ ಇತರರಿಗೆ ಪ್ರೇರಣೆಯಾಗಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಹಂಪಯ್ಯನಮಾಳಿಗೆ ಗೊಲ್ಲರಹಟ್ಟಿ ಮುಖ್ಯಶಿಕ್ಷಕ ಜಯಣ್ಣ.ಹೆಚ್ ಮಾತನಾಡಿ ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ತರಗತಿಗಳ ಅವಶ್ಯಕತೆಯಿದ್ದು ವಿದ್ಯಾರ್ಥಿಗಳಲ್ಲಿ ಉತ್ಸಾಹ ಮೂಡಿಸುತ್ತವೆ. ಈ ರೀತಿಯ ಕಾರ್ಯಾಗಾರಗಳಿಗೆ ಇಲಾಖೆ ಸ್ಪಂದಿಸುತ್ತದೆ ಎಂದ ಅವರು ಸ್ಟೆಕ್ ಶಿಕ್ಷಣ ಸಂಸ್ಥೆಯ ದಿಟ್ಟ ಹೆಜ್ಜೆಯನ್ನು ಅಭಿನಂದಿಸಿದರು. ಕಾರ್ಯಕ್ರಮದಲ್ಲಿ ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಅಂಗನವಾಡಿ ಕಾರ್ಯಕರ್ತರು ಸಂಘಟಿತರಾಗಿ ಹೋರಾಟ ನಡೆಸಬೇಕು

**ಚಳ್ಳಕೆರೆ**

ರಾಜ್ಯದಲ್ಲಿ ಕಳೆದ ಹಲವಾರು ದಶಕಗಳಿಂದ ಅತ್ಯಂತ ಕಡಿಮೆ ಗೌರವ ದನದಲ್ಲಿ ಜೀವನ ನಿರ್ವಹಿಸುತ್ತಿರುವ ಅಂಗನವಾಡಿ ಶಿಕ್ಷಕಿಯರು ಮತ್ತು ಸಹಾಯಕಿಯರ ಮೂಲಭೂತ ಸೌಕರ್ಯಗಳನ್ನು ಈಡೇರಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿತ್ತು. ರಾಜ್ಯದ 127 ತಾಲ್ಲೂಕುಗಳಲ್ಲಿ ನಮ್ಮ ಸಂಘಟನೆ ಅತ್ಯಂತ ಬಲವಾಗಿ ಹೋರಾಟ ನಡೆಸಿದ ಫಲವಾಗಿ ಮುಖ್ಯಮಂತ್ರಿಗಳು ಪ್ರಸ್ತುತ ಆಯವ್ಯಯದಲ್ಲಿ ಮಾಹೆಯಾನ 2 ಸಾವಿರ ವೇತನ ಹೆಚ್ಚಳಕ್ಕೆ ಅನುಮತಿ ನೀಡಿದ್ದಾರೆ. ನಮ್ಮ ಸಂಘಟನೆ ಇನ್ನೂ ಹೆಚ್ಚಿನ ಹೋರಾಟ ನಡೆಸಿದಲ್ಲಿ ನಮ್ಮ ಎಲ್ಲಾ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಸುನಂದಮ್ಮ ತಿಳಿಸಿದರು.

ಅವರು ಭಾನುವಾರ ಇಲ್ಲಿನ ಎಪಿಎಂಸಿ ಸಭಾಂಗಣದಲ್ಲಿರುವ ಶ್ರಮಿಕ ಭವನದಲ್ಲಿ ಸಿಐಟಿಯು ಸಂಘಟನೆ ಹಮ್ಮಿಕೊಂಡಿದ್ದ ಅಂಗನವಾಡಿ ನೌಕರರ ಹೋರಾಟದ ಸಮಾವೇಶ ಮತ್ತು ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ರಾಜ್ಯ ಸರ್ಕಾರ ಅಂಗನವಾಡಿ ನೌಕರರ ಬೇಡಿಕೆಗಳನ್ನು ಪೂರ್ಣಪ್ರಮಾಣದಲ್ಲಿ ಈಡೇರಿಸುವ ಭರವಸೆ ನಮಗಿತ್ತು. ನಮ್ಮ ಸಂಘಟನೆಯಲ್ಲಿ ಉಂಟಾದ ಅಪರಸ್ವರಸ ಫಲವಾಗಿ ಕೇವಲ ವೇತನ ಮಾತ್ರ ಹೆಚ್ಚಳವಾಗಿದೆ ಎಂದರು.

ರಾಜ್ಯ ಕಾರ್ಯದರ್ಶಿ ಸೈಯದ್ ಮುಜೀಬ್ ಮಾತನಾಡಿ, ರಾಜ್ಯ ಸಂಘದ ಕರೆಯ ಮೇರೆಗೆ ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕಿಯರು ಅಹೋರಾತ್ರಿ ಹೋರಾಟ ನಡೆಸಿದರು. ಸಂಘಟನೆಯೊಂದಿಗೆಕೈಜೋಡಿಸಿದರು. ಇದರ ಪ್ರತಿಫಲವಾಗಿ ವೇತನ ಹೆಚ್ಚಳವಾಯಿತು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಐಟಿಯು ಪ್ರಧಾನ ಕಾರ್ಯದರ್ಶಿ ಟಿ.ತಿಪ್ಪೇಸ್ವಾಮಿ, ರಾಜ್ಯ ಸರ್ಕಾರ ಕೇವಲ ವೇತನ ಹೆಚ್ಚಳ ಮಾಡುವ ಮೂಲಕ ಬಹುತೇಕ ಬೇಡಿಕೆಗಳನ್ನು ಕೈಬಿಟ್ಟಿದೆ. ಪ್ರಸ್ತುತ ಸ್ಥಿತಿಯಲ್ಲಿ ಅಂಗನವಾಡಿ ನೌಕರರು ಮತ್ತು ಸಹಾಯಕರು ಸಿಗುವ ಕಡಿಮೆ ಗೌರವ ದನದಿಂದ ಬದುಕು ಸಾಗಿಸಲು ಸಾಧ್ಯವಾಗುತ್ತಿಲ್ಲ, ಈ ಬಗ್ಗೆ ಉಗ್ರ ಹೋರಾಟಕ್ಕೆ ಸಜ್ಜಾಗಬೇಕೆಂದು ಮನವಿ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಐಟಿಯು ಅಧ್ಯಕ್ಷರಾದ ಕೆ.ವಿ.ವೀರಭದ್ರಪ್ಪ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಡಿ.ಎಂ. ಮಲಿಯಪ್ಪ, ಸಿ.ಕೆ.ಗೌಸ್‌ಪೀರ್, ಟಿ.ನಿಂಗಣ್ಣ, ಎಚ್.ಓ.ನಾಗರಾಜು ಮುಂತಾದವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸಿಐಟಿಯು ನೇತೃತ್ವದ ಅಂಗನವಾಡಿ ನೌಕರರ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಜಯಲಕ್ಷ್ಮಮ್ಮ, ಪ್ರಧಾನ ಕಾರ್ಯದರ್ಶಿ ಬೋರಮ್ಮ, ಉಪಾಧ್ಯಕ್ಷರಾಗಿ ಗಂಗಮ್ಮ, ಅಂಬುಜಾಕ್ಷಮ್ಮ, ವಿಮಾಲಾದೇವಿ, ಖಜಾಂಚಿ ಜೆ.ಎನ್.ಗಂಗಮ್ಮ, ಸಹ ಕಾರ್ಯದರ್ಶಿ ಸಾಕೀಬಾಯಿ, ಇಂದಿರಮ್ಮ, ದೇವಿರಮ್ಮರವರನ್ನು ಆಯ್ಕೆ ಮಾಡಲಾಯಿತು.

# ಮಕ್ಕಳ ಕ್ರೀಡಾ ಸಾಧನೆಗೆ ಪ್ರೋತ್ಸಾಹ ಬೇಕು:ಗೊಪ್ಪೆ



ಚಿತ್ರದುರ್ಗ;

ಮಕ್ಕಳ ಕ್ರೀಡಾ ಸಾಧನೆಗೆ ಪಾಲಕರು ಸೂಕ್ತ ಪ್ರೋತ್ಸಾಹ ನೀಡಬೇಕು ಎಂದು ನಗರಸಭೆ ಅಧ್ಯಕ್ಷ ಮಂಜುನಾಥ್ ಗೊಪ್ಪೆ ಹೇಳಿದರು.

ನಗರದ ಮುರುಘಾ ರಾಜೇಂದ್ರ ಕ್ರೀಡಾಂಗಣದಲ್ಲಿ ಭಾನುವಾರ ಜಿಲ್ಲಾ ಕ್ರಿಕೆಟ್ ಅಕಾಡೆಮಿಯ ಕ್ರಿಕೆಟ್ ಬೌಲಿಂಗ್ ಮಿಷನ್ ಉದ್ಘಾಟಿಸಿ ಮಾತನಾಡಿದರು. ಕ್ರೀಡೆಗಳಲ್ಲಿ ಭಾಗವಹಿಸಿದರೆ ಓದಲಿಕ್ಕೆ ಆಗುವುದಿಲ್ಲ ಎನ್ನುವ ಭಾವನೆ ಪಾಲಕರದ್ದಾಗಿದೆ. ಈ ಮನೋಭಾವನೆಯಿಂದ ಹೊರಬರಬೇಕು ಎಂದರು.

ಕ್ರೀಡೆಯಲ್ಲಿ ಭಾಗವಹಿಸುವುದರಿಂದ ಆರೋಗ್ಯ ಹಾಗೂ ಏಕಾಗ್ರತೆ ಸುಧಾರಿಸುತ್ತದೆ. ಇದು ಉತ್ತಮ ಓದಿಗೆ ಅನುಕೂಲವಾಗುತ್ತದೆ. ಮಧುಮೇಹ ಬಂದಾಗ ವಾಕಿಂಗ್ ಹೋಗುವುದಲ್ಲ, ದೈಹಿಕ ಸದೃಢತೆ ದೃಷ್ಟಿಯಲ್ಲಿಟ್ಟುಕೊಂಡು ಕ್ರೀಡೆಯಲ್ಲಿ ಪಾಲ್ಗೊಳ್ಳಬೇಕು ಎಂದು ಹೇಳಿದರು.

ಕ್ರೀಡೆಯನ್ನು ವೃತ್ತಿಯಾಗಿ ತೆಗೆದು ಕೊಳ್ಳಲು ಇಂದಿಗೂ ಸಾಧ್ಯವಾಗುತ್ತಿಲ್ಲ, ಕ್ರೀಡೆ ಜತೆಗೆ ಓದಿಗೂ ಮಹತ್ವ ನೀಡಬೇಕು. ಜೀವನದಲ್ಲಿ ಶಿಕ್ಷಣ ಬಹಳ ಮುಖ್ಯ. ಶಿಕ್ಷಣದ ಜೊತೆಗೆ ಕ್ರೀಡೆಯನ್ನು ಸಮ, ಸಮನಾಗಿ ಮುಂದುವರಿಸಿಕೊಂಡು ಹೋಗಬೇಕು. ಇದರಿಂದ ದೈಹಿಕ ಸಾಮರ್ಥ್ಯ ಲಭ್ಯವಾಗುತ್ತದೆ. ಜತೆಗೆ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಚಿತ್ರದುರ್ಗದಲ್ಲಿ ಉತ್ತಮ ಕ್ರಿಕೆಟ್ ಪಟುಗಳಿದ್ದು, ಇವರಿಗೆ ಮತ್ತಷ್ಟು ಪ್ರೋತ್ಸಾಹ ನೀಡಿ ಈ ಕ್ಷೇತ್ರದಲ್ಲಿ ಸಾಧನೆ ಮಾಡಿ ಜಿಲ್ಲೆಗೆ ಹೆಸರು ತರಲಿ ಎಂಬ ಉದ್ದೇಶದಿಂದ ಮೂರುವರೆ ಲಕ್ಷದಲ್ಲಿ ಬೌಲಿಂಗ್ ಮಿಷನ್ ತರಲಾಗಿದೆ. ಇದಕ್ಕ ನಗರಸಭೆಯಿಂದ ಒಂದು ಲಕ್ಷ ರೂ. ನೀಡಲಾಗಿದೆ. ಮುಂದಿನ ದಿನಗಳಲ್ಲಿ ಕ್ರೀಡಾ ಚಟುವಟಿಕೆಗೆ ಮತ್ತಷ್ಟು ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ನಾನು ಆಡ್ತಾಯಿದ್ದೆ: ಬೌಲಿಂಗ್ ಮಿಷನ್ ಉದ್ಘಾಟನೆ ವೇಳೆ ವಿದ್ಯಾರ್ಥಿ ದಿನಗಳನ್ನು ಮೆಲಕು ಹಾಕಿದ ಮಂಜುನಾಥ್ ಗೊಪ್ಪೆ, ನಾ ಹೈಸ್ಕೂಲ್ ಓದುವಾಗ ದಿನ ಇದೇ ಕ್ರೀಡಾಂಗಣಕ್ಕೆ ಪ್ರಾಕ್ಟೀಸ್‌ಗೆ ಬರ್ತಾಯಿದ್ದೆ. ಆಗ ಇಂದಿನಷ್ಟು ಸೌಲಭ್ಯವಿರಲಿಲ್ಲ, ಇರುವುದರಲ್ಲೇ ಆಟವಾಡುತ್ತಿದ್ದೇವು ಎಂದರು.

ನಗರಸಭೆ ಸದಸ್ಯ ಚಂದ್ರಶೇಖರ್, ಕ್ಲಬ್‌ನ ರಮೇಶ್ ರಾವ್, ಎನ್.ಆಶೋಕ್, ಎ.ಬಾಸ್ಕರ್, ಎನ್.ಡಿ.ಕುಮಾರ್ ಹಾಗೂ ಸಂಘದ ಪದಾಧಿಕಾರಿಗಳು, ಸದಸ್ಯರು ಇದ್ದರು.

ಪ್ರಜಾ ಪ್ರಗತಿ ಓದಿರಿ,
ಪ್ರಗತಿ ಟಿವಿ ವೀಕ್ಷಿಸಿ

# ಸರಗಳ್ಳತನ, ಕಳವು ಮುಂತಾದ ಪ್ರಕರಣಗಳ ನಿಯಂತ್ರಣಕ್ಕೆ ನಾಗರೀಕರ ಸಹಕಾರ ಅಗತ್ಯ



**ಚಳ್ಳಕೆರೆ**

ಇತ್ತೀಚಿನ ದಿನಗಳಲ್ಲಿ ಹಾಡುಹಗಲೇ ರಸ್ತೆಯ ಮೇಲೆ ಓಡಾಡುವ ಮಹಿಳೆಯರನ್ನು ಗುರಿಯನ್ನಾಗಿಸಿ ಅವರ ಗಮನವನ್ನು ಬೇರೆಡೆಗೆ ಸೆಳೆದು ಮಾಂಗಲ್ಯ ಸರವನ್ನು ಅಪಹರಣ ಮಾಡುವ ಪ್ರಕರಣಗಳು ಹೆಚ್ಚುತ್ತಿದ್ದು, ಈ ಬಗ್ಗೆ ಮಹಿಳೆಯರಲ್ಲಿ ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಪೊಲೀಸ್ ಇಲಾಖೆ ಮುಂದಾಗಿದೆ. ಕಳ್ಳತನ, ಸುಲಿಗೆ ಚೈನ್ ಅಪಹರಣ, ಮಹಿಳೆಯರಿಗೆ ಕಿರುಕುಳ, ನಕಲಿ ಬಂಗಾರ ನೀಡಿ ವಂಚನೆ ಇಂತಹ ಹಲವಾರು ಪ್ರಕರಣಗಳನ್ನು ಪತ್ತೆಹಚ್ಚುವಲ್ಲಿ ಪೊಲೀಸ್ ಇಲಾಖೆ ಮತ್ತು ಸಿಬ್ಬಂದಿ ವರ್ಗ ಸದಾ ಜಾಗೃತವಾಗಿರುತ್ತದೆ. ಸಾರ್ವಜನಿಕರು ಪೊಲೀಸ್ ಇಲಾಖೆಯೊಂದಿಗೆ ಕೈಜೋಡಿಸಲ್ಲಿ ಇಂತಹ ಪ್ರಕರಣಗಳನ್ನು ಸಂಪೂರ್ಣವಾಗಿ ನಿಯಂತ್ರಿಸಬಹುದಾಗಿದೆ ಎಂದು ಉಪವಿಭಾಗದ ಡಿವೈಎಸ್ಪಿ ಎಸ್. ರೋಷನ್ ಜಮೀರ್ ತಿಳಿಸಿದ್ದಾರೆ.

ಅವರು, ಶನಿವಾರ ಇಲ್ಲಿನ ವಿಠಲನಗರ ಮತ್ತು ವಾಲ್ಮೀಕಿ ನಗರ(ಹೊಸಬೇಡರಹಟ್ಟಿ) ಗಳಲ್ಲಿ ಮೊಹಲ್ಲಾ ಸಭೆಗಳ ಅಧ್ಯಕ್ಷತೆ ವಹಿಸಿ ಮಾತನಾಡಿದರು. ನಗರದ ನಾಗರೀಕರು ಇಂತಹ ಪ್ರಕರಣಗಳಿಂದ ಭಯಭೀತರಾಗುವುದು ಸ್ವಾಭಾವಿಕ. ಪೊಲೀಸ್ ಇಲಾಖೆ ಕಳ್ಳತನ ಪ್ರಕರಣಗಳ ನಿಯಂತ್ರಣಕ್ಕೆ ಮೊದಲ ಆದ್ಯತೆ ನೀಡಿ ಶ್ರಮಿಸುತ್ತಿದೆ. ಕೆಲವೊಮ್ಮೆ ಸಕಾಲದಲ್ಲಿ ಮಾಹಿತಿ ದೊರೆಯದ ಕಾರಣ ವಿಳಂಬವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ಇಂತಹ ಪ್ರಕರಣಗಳು ನಡೆದಾಗ ಕೂಡಲೇ ಇಲ್ಲಿನ ಪೊಲೀಸ್ ಠಾಣೆ ಮತ್ತು ಅಧಿಕಾರಿಗಳ ದೂರವಾಣಿಗೆ ಸಂಪರ್ಕಿಸಲು ಮನವಿ ಮಾಡಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ವೃತ್ತ ನಿರೀಕ್ಷಕ ಎನ್.ತಿಮ್ಮಣ್ಣ, ಮಾಂಗಲ್ಯ ಸರ ಅಪರಹಣ, ಸುಲಿಗೆ ಬೆದರಿಕೆ, ಲೈಂಗಿಕ ಕಿರುಕುಳ, ಪ್ರೀತಿಸಿ ವಂಚಿಸುವುದು, ನಯವಂಚನೆಯಿಂದ ಬಂಗಾರದ ಆಭರಣಗಳನ್ನು ತೆಗೆದುಕೊಂಡು ಹೋಗುವುದು, ಯಾರೂ ಇಲ್ಲದ ಸಮಯದಲ್ಲಿ ನಕಲಿ ಕೀ ಉಪಯೋಗಿಸಿ ಮನೆಯ ಬೀಗ ಹೊಡೆದು ಕಳ್ಳತನ ಮಾಡುವುದು, ಇತ್ತೀಚೆಗೆ ನಗರದ ವಿವಿದೆಡೆ ನಡೆಯುತ್ತಿದ್ದು, ಇವುಗಳನ್ನು ನಿಯಂತ್ರಿಸಲು ಪೊಲೀಸ್ ಇಲಾಖೆ, ಜಿಲ್ಲಾ ರಕ್ಷಣಾಧಿಕಾರಿಗಳು ಮತ್ತು ಹೆಚ್ಚುವರಿ ರಕ್ಷಣಾಧಿಕಾರಿಗಳ ಮಾರ್ಗದರ್ಶನದಲ್ಲಿ ಅತ್ಯಂತ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿದೆ. ಆದರೆ, ಇಂತಹ ಪ್ರಕರಣಗಳ ಪುನರಾವರ್ತನೆಯಾಗದಂತೆ ಜಾಗೃತ ವಹಿಸಬೇಕಾಗಿದೆ. ಇತ್ತೀಚೆಗೆ ತಾನೇ ನಗರದ ವಿವಿಧೆಡೆ ನಡೆದ ಸುಮಾರು 6 ಪ್ರಕರಣಗಳನ್ನು ಪತ್ತೆ ಹಚ್ಚಿ ಮೂರು ಜನರನ್ನು ಬಂಧಿಸಿ ಲಕ್ಷಾಂತರ ಮೌಲ್ಯದ ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಹುತೇಕ ಎಲ್ಲಾ ಪ್ರಕರಣಗಳಲ್ಲಿ ಮಹಿಳೆಯರನ್ನೇ ಗುರಿಯನ್ನಾಗಿಸಲಾಗಿದೆ. ಸಾಮಾನ್ಯವಾಗಿ ಇಂತಹ ಸುಲಿಗೆಕೋರರು ಮೋಟಾರ್ ಬೈಕ್‌ಗಳಲ್ಲಿ ಬರುವುದು ಹೆಚ್ಚು, ಒಬ್ಬ ವ್ಯಕ್ತಿ ನಿಮ್ಮೊಡನೆ ಬಂದು ಸರಕಿತ್ತರೆ ಮತ್ತೊಬ್ಬ ವ್ಯಕ್ತಿ ಬೈಕ್‌ನಲ್ಲಿ ಪರಾರಿಯಾಗಲು ಕಾಯುತ್ತಿರುತ್ತಾನೆ. ಮನೆಯಂಗಳ ಕಸ ಹೊಡೆಯುವಾಗ, ಹೂ ಕೀಳುವ ಸಂದರ್ಭ, ಒಂಟಾಯಾಗಿ ಓಡಾಡುವ ಮಹಿಳೆಯರನ್ನು ಹೆಚ್ಚು ಗಮನಿಸುತ್ತಾರೆ. ದಿಢೀರನೆ ಕುತ್ತಿಗೆಗೆ ಕೈಹಾಕಿ ಸರಕೀಳುವ ಯತ್ನ ಮಾಡುವುದರಿಂದ ಮಹಿಳೆಯರು ಆತಂಕಕ್ಕೆ, ಭಯಕ್ಕೆ ಈಡಾಗುತ್ತಾರೆ. ಅವರು ಚೇತರಿಸಿಕೊಳ್ಳುವ ಮೊದಲೇ ಕಳ್ಳರು ಪರಾರಿಯಾಗಿರುತ್ತಾರೆ. ಆದ್ದರಿಂದ ಸುತ್ತಮುತ್ತ ಅಪರಿಚಿತ ವ್ಯಕ್ತಿಗಳು ಬಂದಲ್ಲಿ, ವಿಳಾಸ ಕೇಳಿದಲ್ಲಿ, ಅನುಮಾನಾಸ್ಪದವಾಗಿ ಓಡಾಡಿದಲ್ಲಿ ಕೂಡಲೇ ಪೊಲೀಸರಿಗೆ ಮಾಹಿತಿ ನೀಡುವಂತೆ ಮನವಿ ಮಾಡಿದರು. ನಾಗರೀಕರು ಸುಲಿಗೆ, ಕಳ್ಳತನ ಪ್ರಕರಣಗಳಲ್ಲಿ ಸಾಧ್ಯವಾದರೆ ವಾಹನಗಳ ಸಂಖ್ಯೆ ಮತ್ತು ಬಣ್ಣ ನಮೂದಿಸಿಕೊಳ್ಳಬೇಕು. ನಿಮ್ಮ ಮನೆಯ ಸುತ್ತ ಸಿಸಿ ಟಿವಿಗಳನ್ನು ಅಳವಡಿಸಿಬೇಕು. ಸಾಧ್ಯವಾದಲ್ಲಿ ಬರ್ಗರ್ ಅಲಾರಂ ಬಳಸಿಕೊಳ್ಳುವಂತೆ ಮನವಿ ಮಾಡಿದರು. ಮೊಹಲ್ಲಾ ಸಭೆಯಲ್ಲಿ ಸಬ್ ಇನ್ಸಪೆಕ್ಟರ್ ಸತೀಶ್ ನಾಯ್ಕ, ಮುಖಂಡ ಮಂಜುನಾಥ, ಗಂಗಾಧರ, ಭಾಗ್ಯಮ್ಮ, ಈಶಣ್ಣ, ನಾಗರಾಜು, ಸೂರಿ, ಪಾಲೇಶ್, ಜೆ.ಬಸವರಾಜು, ಮಂಜುನಾಥ ಮುಂತಾದವರು ಉಪಸ್ಥಿತರಿದ್ದರು.

# ಉಪವಾಸದಿಂದ ಹಸಿವಿನ ಅರಿವು:ಶಿಮೂಶ

**ಚಿತ್ರದುರ್ಗ**

ಪರಮಪವಿತ್ರವಾದ ರಂಜಾನ್ ಹಬ್ಬದಲ್ಲಿ ಒಂದು ತಿಂಗಳ ಕಾಲ ಉಪವಾಸವಿರುವುದು ವೈಜ್ಞಾನಿಕವಾಗಿ ಅತ್ಯಮೂಲ್ಯವಾದುದು ಇದರಿಂದ ಮತ್ತೊಬ್ಬರ ಹಸಿವಿನ ಅರಿವಾಗುತ್ತದೆ ಎಂದು ಮುರುಘಾಮಠದ ಡಾ.ಶಿವಮೂರ್ತಿ ಶರಣರು ಹೇಳಿದರು.

ಮೆದೇಹಳ್ಳಿ ರಸ್ತೆಯಲ್ಲಿರುವ ಮಸ್ಜಿದ್ ಎ ಖುಭಾ ಮಸೀದಿಯಲ್ಲಿ ಶುಕ್ರವಾರ ಏರ್ಪಡಿಸಲಾಗಿದ್ದ ಇಫ್ತಾಯರ್ ಕೂಟದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಮಹಮದ್‌ಪೈಗಂಬರ್‌ರವರು ಕೇವಲ ಮುಸ್ಲಿಂ ಜನಾಂಗಕ್ಕೆ ಮಾತ್ರ ಮೀಸಲಲ್ಲ, ಇಡೀ ಮಾನವ ಕುಲಕ್ಕೆ ಶಾಂತಿಯ ಸಂದೇಶವನ್ನು ನೀಡಿದವರು. ಅದರಂತೆ ಎಲ್ಲರೊಂದಿಗೆ ಶಾಂತಿ ಸಹಬಾಳ್ವೆಯಿಂದ ಜೀವನ ಸಾಗಿಸಬೇಕಾಗಿದೆ ಎಂದು ತಿಳಿಸಿದರು.

ಸಮಸ್ತ ಮಾನವ ಕುಲಕ್ಕೆ ಕುರಾನ್ ಪವಿತ್ರ ಗ್ರಂಥವಾಗಿದೆ. ಹಾಗಾಗಿ ರಂಜಾನ್ ಉಪವಾಸ ಮಾಸದಲ್ಲಿ ವರುಣ ಕೃಪೆ ತೋರಿ ನಿಸರ್ಗವನ್ನೇ ಧರೆಗಿಳಿಸಬೇಕಾಗಿದೆ. ಕೆಲವರು ಮಳೆಗಾಗಿ ಪ್ರಾರ್ಥಿಸಿ ಹವನ, ಹೋಮ, ಇಲ್ಲಸಲ್ಲದ ಪ್ರಾರ್ಥನೆಗಳನ್ನು ಮಾಡುವುದುಂಟು. ಆದರೆ ಇಫ್ತಾಯರ್ ಕೂಟದಲ್ಲಿ ಮಳೆಯ ಸಿಂಚನವಾಗಿರುವುದು ಶುಭ ಸಂಕೇತ ಎಂದರು.

ಉಪವಾಸ ಸಂದರ್ಭದಲ್ಲಿ ಅಪ್ಪಿತಪ್ಪಿಯೂ ಕೆಟ್ಟ ಮಾತನ್ನು ಆಡುವಂತಿಲ್ಲ. ಯಾರ ಮನಸ್ಸನ್ನು ನೋಯಿಸಬಾರದು. ಅಕ್ಕಪಕ್ಕದಲ್ಲಿ ಯಾರಾದರು ಊಟವಿಲ್ಲದೆ ಹಸಿವಿನಿಂದ ಇದ್ದರೆ ಅಂತಹವರಿಗೆ ಧಾನ ಮಾಡುವುದು ಈ ಹಬ್ಬದ ವಿಶೇಷ. ಮತ್ತೊಂದು ಪ್ರಮುಖ ಅಂಶವೆಂದರೆ ಉಳ್ಳವರು ತಮ್ಮ ದುಡಿಯಮೆ ಪಾಲಿನಲ್ಲಿ ಇಂತಿಷ್ಟು ಹಣವನ್ನು ತೆಗೆದು ಜಕಾತ್ ರೂಪದಲ್ಲಿ ನೀಡುವುದುಂಟು. ಯಾವುದೇ ಜಾತಿ ಬೇದವಿಲ್ಲದೆ ಎಲ್ಲರೂ ಒಟ್ಟುಗೂಡಿ ಇಫ್ತಾಯರ್ ಕೂಟ ಏರ್ಪಡಿಸಿರುವುದು ಅತ್ಯಂತ ಸಂತೋಷದ ಸಂಗತಿ ಶರಣರು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ರಕ್ಷಣಾಧಿಕಾರಿ ಅರುಣ್‌ರಂಗರಾಜನ್ ಮಾತನಾಡಿ ಹಬ್ಬಗಳು ಶಾಂತಿಯಿಂದ ನಡೆಯಬೇಕಾಗಿರುವುದರಿಂದ ಎಂತಹ ಸಂದರ್ಭದಲ್ಲಿಯಾದರೂ ನಿಮ್ಮ ಜೊತೆಗಿದ್ದ ಇಲಾಖೆಯಿಂದ ಅಗತ್ಯ ರಕ್ಷಣೆ ನೀಡುವುದಾಗಿ ಭರವಸೆ ಕೊಟ್ಟರು.

ಟಿ.ಗಂಗಣ್ಣ, ಸಂಜೀವಣ್ಣ, ಬಿ.ನಾಗೇಂದ್ರಪ್ಪ, ನೂರುಲ್ಲಾ, ಆರ್.ಕೆ.ಸರ್ದಾರ್ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

>>> 4 ನೇ ಪುಟಕ್ಕೆ